**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10035/2025**

| | |
|---|---|
| ಹೆಸರುಃ | ರೂಪಾ ತಳವಾರ |
| ಗಂಡನ ಹೆಸರುಃ | ಕರಿಯಪ್ಪ |
| ವಯಸ್ಸುಃ | **28** ವರ್ಷ |
| ಉದ್ಯೋಗಃ | ಒಕ್ಕಲುತನ |
| ವಾಸಃ | ಮಂಟೂರ |

**ಸಾಕ್ಷಿಯನ್ನು ದಿಃ 19.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

**1.** ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ಚಾಸಾ-**1** ನನ್ನ ಸಂಬಂಧಿಕಳು. ಚಾಸಾ-**6** ಹಾಗೂ **7** ನನ್ನ ಚಿಕ್ಕ ಮಾವ ಹಾಗೂ ಚಿಕ್ಕ ಅತ್ತೆ ಇರುತ್ತಾರೆ. ಚಾಸಾ-**8** ರಿಂದ **11** ನನ್ನ ಸಂಬಂಧಿಕರು ಇರುತ್ತಾರೆ. ಸುಮಾರು ಮೂರು ವರ್ಷಗಳ ಹಿಂದೆ ಚಾಸಾ-**1** ನ್ಯಾಯಾಲಯದ ಮುಂದಿರುವ **1** ನೇ ಆರೋಪಿ ಚೇತನ ಈತನನ್ನು ಪ್ರೀತಿ ಮಾಡುತ್ತಿದ್ದಳು. ನಮ್ಮ ಮನೆಯಲ್ಲಿ ಅವಳ ಪ್ರೀತಿಯನ್ನು ವಿರೋಧಿಸಿದ್ದು, ಅದನ್ನು ನಿಲ್ಲಿಸಬೇಕೆಂದು ಹೇಳಿದ್ದರು.

**2.** ನಂತರ ಚಾಸಾ-**1** ಒಂದು ದಿವಸ ತಾನು ಮುಧೋಳದ ಕಾಲೇಜಗೆ ಹೋಗುವಾಗ ಆರೋಪಿತರು ತೊಂದರೆ ಕೊಟ್ಟರು ಅಂತ ಬಂದು ಹೇಳಿದಳು. ನಾವು ಒಂದು ದಿವಸ ಮನೆಯಲ್ಲಿ ಮಲಗಿದ್ದಾಗ **1** ನೇ ಆರೋಪಿ ರಾತ್ರಿ ನಮ್ಮ ಮನೆಯ ಬಾಗಿಲಿಗೆ ಬೆಂಕಿ ಹಚ್ಚಿದ್ದ. ನಮ್ಮ ಸಮಾಜದ ಹಿರಿಯರ ಮುಖಾಂತರ **1** ನೇ ಆರೋಪಿಗೆ ತಿಳುವಳಿಕೆ ಹೇಳಿಸಲಾಗಿತ್ತು.

**3.** ಚಾಸಾ-**1** ಮಹಾದೇವಿ ಮುಧೋಳದಲ್ಲಿಯ ಒಂದು ಬಟ್ಟೆಯ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಳು. **1** ನೇ ಆರೋಪಿತನು ಅಲ್ಲಿಗೂ ಕೂಡ ಬಂದು ಚಾಸಾ-**1** ಇವಳಿಗೆ ತನ್ನನ್ನು ಮದುವೆಯಾಗು ಅಂತ ಪೀಡಿಸಿದ ಅಂತ ಚಾಸಾ-**1** ನಮಗೆ ತಿಳಿಸಿದಳು. ಅದಾದ ಸುಮಾರು ಒಂದು ತಿಂಗಳ ನಂತರ ನಾನು ಹಾಗೂ ನನ್ನ ಮಕ್ಕಳು ಮತ್ತು ಚಾಸಾ-**6, 7, 9, 10, 11, 1** ರವರು ಮನೆಯ

ಮುಂದಿನ ಅಂಗಳದಲ್ಲಿ ಮಲಗಿಕೊಂಡಿದ್ದೆವು. ಸುಮಾರು ರಾತ್ರಿ **12-00** ಗಂಟೆಯ ಸಮಯದಲ್ಲಿ **1**ನೇ ಆರೋಪಿ ಚೇತನ ಮಹಾದೇವಿಗೆ ಕಲ್ಲು ಹೊಡೆದು ಓಡಿ ಹೋದ. ಅದರಿಂದ ಆಕೆಗೆ ತಲೆಗೆ ರಕ್ತ ಗಾಯವಾಗಿತ್ತು. ಅಲ್ಲಿ ಇನ್ನೊಬ್ಬ ಆರೋಪಿ ಅನೀಲ ಮೋಟಾರ್ ಸೈಕಲ ತೆಗೆದುಕೊಂಡು ಬಂದಿದ್ದ. ಚಾಸಾ-**9** ಅವರನ್ನು ಬೆನ್ನಟ್ಟಿದರೂ ಅವರು ಸಿಗಲಿಲ್ಲ.

**4.** ನಂತರ ಅವಳನ್ನು ಕರೆದುಕೊಂಡು ಮುಧೋಳದ ಸರ್ಕಾರಿ ಆಸ್ಪತ್ರೆಗೆ ಬಂದೆವು. ಹೆಚ್ಚು ಗಾಯವಾಗಿದೆ ಅಂತ ಅವಳನ್ನು ಮುಧೋಳದಿಂದ ಕೆರೂಡಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದರು. ನಾವು ಅವಳನ್ನು ಬಾಗಲಕೋಟೆಯ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಚಾಸಾ-**1** ರವರು **15** ದಿನಗಳ ಕಾಲ ಚಿಕಿತ್ಸೆ ಪಡೆದಿದ್ದಾಳೆ. ಈಗ ನೋಡುತ್ತಿರುವ ಮುಮಾ-**2** ಆರೋಪಿ ನಂ. **1** ಚಾಸಾ-**1** ಇವರಿಗೆ ಹೊಡೆಯಲು ಉಪಯೋಗಿಸಿದ ಕಲ್ಲು ಇರುತ್ತದೆ. ಮುಮಾ-**1** ಅವಳ ರಕ್ತ ಹತ್ತಿದ ಚೂಡಿದಾರ ಟಾಪ್ ಹಾಗೂ ಮುಮಾ-**3** ರಕ್ತ ಹತ್ತಿದ ದಿಂಬು ಇರುತ್ತದೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**<u>ಪಾಟಿಸವಾಲು: 1 & 2ನೇ ಆರೋಪಿ ಪರ ಶ್ರೀ.ಎ.ಎಸ್.ಎಸ್. ವಕೀಲರಿಂದ:</u>**

**1. 1**ನೇ ಆರೋಪಿತನು ಚಾಸಾ-**1** ಇವರಿಗೆ ಕಲ್ಲು ಎಸೆಯುವುದನ್ನು ನಾನು ನೋಡಿರುತ್ತೇನೆ. ರಾತ್ರಿ **12** ಗಂಟೆಯ ಸಮಯದಲ್ಲಿ ಸಾಮಾನ್ಯವಾಗಿ ನಿದ್ರಿಸುವವರು ಗಾಢ ನಿದ್ರೆಯಲ್ಲಿರುತ್ತಾರೆ ಎಂದರೆ ಸರಿ. ನಾನು ಕೂಡ ನಿದ್ರೆಯಲ್ಲಿದ್ದು, ಘಟನೆ ನೋಡಿರುತ್ತೇನೆ ಅಂತ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **1**ನೇ ಆರೋಪಿ ಬಾಗಿಲಿಗೆ ಬೆಂಕಿ ಹಚ್ಚಿದ ಎಂಬ ಘಟನೆಯಲ್ಲಿ ನಾನು ಕಣ್ಣಾರೆ ನೋಡಿಲ್ಲ.

**2.** ಆರೋಪಿ ನಂ. **1** ಹಾಗೂ ಚಾಸಾ-**1** ಪ್ರೀತಿ ಮಾಡುವುದನ್ನು ನಾನು ಸ್ವತ: ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನಂ. **3** ಘಟನೆಯ ನಂತರ ಆರೋಪಿ ನಂ. **1** ಇವರನ್ನು ಮೋಟಾರ್ ಸೈಕಲ ಮೇಲೆ ಕರೆದುಕೊಂಡು ಹೋದ ಅಂತ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.

**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 4**
**ಚಾ.ಸಾ.ಸಂಖ್ಯೆ: 12**

**1** ಚಾಸಾ-**1** ರವರಿಗೆ ಯಾವುದೇ ತೊಂದರೆ ನೀಡದೇ ಇದ್ದರೂ ಕೂಡ ಚಾಸಾ-**1** ಇವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ನಾನು ಮುಖ್ಯಸಾಕ್ಷ್ಯದಲ್ಲಿ ಹೇಳಿದ ಘಟನೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಅಂಗಳದ ಅಕ್ಕ-ಪಕ್ಕದಲ್ಲಿ ಮನೆಗಳು ಇವೆ. ನಮ್ಮ ಮನೆ ಬೇರೆ ಇದೆ ಎಂದರೆ ಸರಿ. ನನ್ನ ಗಂಡ ಹೊಲಕ್ಕೆ ಹೋಗಿದ್ದರಿಂದ ನಾನು ಒಬ್ಬಳೆ ಮಲಗಿಕೊಳ್ಳುವ ಬದಲು ಚಾಸಾ-**1** ಇವರ ಮನೆಯವರೊಂದಿಗೆ ಮಲಗಿಕೊಂಡಿದ್ದೆ. ನನ್ನ ಗಂಡನ ಹೆಸರು ಕರಿಯಪ್ಪ ಸಾಬು ತಳವಾರ ಇರುತ್ತದೆ. ನಾನು ಆ ದಿವಸ ನನ್ನ ಮನೆಯಲ್ಲಿಯೇ ಮಲಗಿದ್ದೆ ಎಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ನೋಡದೆ ಇದ್ದರೂ ಕೂಡ ಚಾಸಾ-**1** ಇವರ ಕುಟುಂಬದರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟಿಸವಾಲು: 3 ರಿಂದ 5ನೇ ಆರೋಪಿ ಪರ ಶ್ರೀ. ಎಸ್.ಜಿ.ಸಿ. ವಕೀಲರಿಂದ:**</u>

**1.** ಆರೋಪಿ ನಂ. **1** ಚಾಸಾ-**1** ಇವರಿಗೆ ಬೆದರಿಕೆ ಹಾಕಿದ ಅಂತ ಹೇಳುವ ಸಂದರ್ಭದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ. ಆ ಬಗ್ಗೆ ಮಹಾದೇವಿ ಹೇಳಿದ್ದರಿಂದ ನಾನು ಸಾಕ್ಷಿ ಹೇಳುತ್ತಿದ್ದೇನೆ. ಮಹಾದೇವಿ ಚಾಸಾ-**1** ಇವರಿಗೆ ಕಲ್ಲು ಒಗೆದರು ಅಂತ ಹೇಳುವ ಸಮದಯಲ್ಲಿ ರಾತ್ರಿ **12** ರಿಂದ **12-30** ಗಂಟೆಯಾಗಿತ್ತು. ಘಟನಾ ಸ್ಥಳದಿಂದ ರಸ್ತೆ ಸುಮಾರು **25-30** ಅಡಿ ಅಗಲವಿದೆ. ರಸ್ತೆಯ ಹಿಂದಿನ ಭಾಗ ನಮಗೆ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ರಾತ್ರಿಯಾಗಿದ್ದರಿಂದ ಯಾರು ಬಂದರು ಯಾರು ಹೋದರು ಅಂತ ನಮಗೆ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿಯಲ್ಲ.

**2.** ನಾನು ಚೇತನ ಓಡಿ ಹೋಗುವುದನ್ನು ನೋಡಿದ್ದೇನೆ. ನಾನು ಆರೋಪಿ ಅನೀಲ ಅಲ್ಲಿರುವುದನ್ನು ನೋಡಿಲ್ಲ. ನಾನು ಯಾವುದೇ ಘಟನೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆಯ ಬಗ್ಗೆ ಯಾವುದೇ ವಿವರಗಳು ಪ್ರತ್ಯಕ್ಷ್ಯ ಮಾಹಿತಿ ಇಲ್ಲದೇ ಇದ್ದರೂ ಕೂಡ ಈಗ

ಚಾಸಾ-**1** ಇವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(**ಉಳಿದಂತೆ ಮೇಲಿನ ಪಾಟಿಸವಾಲನ್ನು ಅಳವಡಿಸಿಕೊಳ್ಳುತ್ತಾರೆ.**)**

**ಮರು ವಿಚಾರಣೆಃ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**
**ನ್ಯಾಯಾಧೀಶರು, ಮುಧೋಳ.**